ಕಡೂರು ಡಿಸ್ಟ್ರಿಕ್ಟು.

ತಾರೀಖು 22ನೇ ಡಿಸಂಬರ್ 1886.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿ ಇರುವ ಪತ್ರಗಳನ್ನು ಕ್ರಮವಾದ ವಾರಸ್ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು 1 ತಿಂಗಳು ವಳಗಾಗಿ ವಾಪಸು ಪಡಿಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸುತ್ತೆ.

ಕ್ರಮ ನಂಬರ್.	ಪ್ರಾಪ್ತಿಯ ಮಿಸಲು.	ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರರ ತಾರೀಖು.	ಬರಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	I	54 1884—85	22—5—84		22—5—84	1 ಸಂಸೆಗ್ರಾಮದಲ್ಲಿರುವ ಪಟೇಲ್ ಈರೇಗೌಡನ ಹೆಂಡತಿ ಹನುಮಮ್ಮ, 2 ಈಕೆ ಮೈದುನ ಉದ್ದೇಗೌಡ	ಮೂಡಗೆರೆ ತಾಲ್ಲೂಕು ಬೈಲಹಳ್ಳಿ ಗ್ರಾಮದಲ್ಲಿ ಇರುವ ವಯಕ್ಕೆ ಲಗಿರ ಲಿಂಗೇಗೌಡನ ಮಗ ಚಿಕ್ಕೇಗೌಡ	ಸಂಸೆ ಗ್ರಾಮದಲ್ಲಿ ಇರತಕ್ಕ 8 ತರೀ ಜಮೀನುಗಳು 100 ರೂಪಾಯಿಗೆ ಕ್ರಯಕ್ಕೆ ಕೊಟ್ಟರುವದಾಗಿ.
2	ಡಿಟೋ	58 1884—85	26—5—84		26—5—84	ಶಿರಿಗೂರಲ್ಲಿರುವ ತಿವಾಚಾರದ ಜಾತಿ ಹುಲಿಗೌಡನ ಮಗ ನಂಜೇಗೌಡ	ಶಿರಿಗೂರು ದಾಖಲೆ ಕೆಸವಿನ ಮನೆಯಲ್ಲಿರುವ ಕುರುಬರ ಬೀರಯ್ಯನಮಗ ಅಚ್ಚಯ್ಯನೇರ್ವಗಾರ	ಶಿರಿಗೂರು ದಾಖಲೆ ಕೆಸವಿನ ಹಡ್ಲು ಅಡ್ಡವಾರೆ ಕಾಫಿತೋಟವೂ 225 ರೂಪಾಯಿಗೆ ಕ್ರಯ.
3	ಡಿಟೋ	134 1884—85	22—7—84		23—7—84	ತಿರುಗಣ ಗ್ರಾಮದ ತಿಮ್ಮೇಗೌಡನ ಮಗ ವಕ್ಕಲ ಮಕ್ಕಳ ಜಾತಿ ತಿಮ್ಮೇಗೌಡ	ಹವಳ್ಳಿಯಲ್ಲಿರುವ ಹಳೆಮನೆ ಸಂಣ ನಿರುವಾಣಿಗೌಡರ ಸಬ್ಬೇಗೌಡನ ಮಗ ಅಮೃತೇಗೌಡ	ತಿರುಗಣ ಗ್ರಾಮದ ನಂಬರ್ 30ನೇ ಪೈಕೀ ಕಾಫಿ ಹಿತ್ತು 50 ರೂಪಾಯಿಯನ್ನ ತೀರಿಸಿಕೊಳ್ಳುವ ಬಗ್ಯೆ 10 ವರುಷದ ವರಿಗೆ ಇಳಿಭೋಗ್ಯಾದಿ ಮಾಡಿರುವಂತ್ತೆ.

ಟಿ. ವ್ಯಾಂಡರ್‌ಲೋರ್,
ಫಾರ್ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜ್‌ರೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರಿ ದೇಣೇದಾರ ಬೆಂಗಳೂರು ಶಿದ್ದಕಟ್ಟೆಯಲ್ಲಿರತಕ್ಕ ಹಿರಾಬೂಬಿನ ವಿಷಯದಲ್ಲಿ—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರು ಮಿ॥ 723.

ಹುಕ್ಕುಂ.

ಮೇಲ್ಕಂಡ ಹಿರಾಬೂಬಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವ್ಯ ಸಬ್ ಜಡ್ಜ್‌ಯವರಾದ ಮೆ॥ ಸಿ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರಳಾದ ಹಿರಾಬೂಬಿಯು ಖುದ್ದಾಗಿಯೂ ಮತ್ತು ಸದರೀಯವಳ ಲೇಣೇದಾರ್‌ರಾದ 1—2ನೇ ರ ತರಫ: ಪ್ಲೀಡರ್ ಗಂಗಾಧರೈಯನವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಹಿರಾಬೂಬಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟರುತ್ತೆ.

ಸ್ಯ 1886ನೇ ಇಸವಿ ಡಿಸಂಬರ್ 6ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.